

ನಿಸರ್ಗದಲ್ಲಿ ಮನುಷ್ಯನ ಹಸ್ತಕ್ಷೇಪಕ್ಕೆ ಇದೊಂದು ಉದಾಹರಣೆ ಇರಬಹುದೇ?
ಚಿತ್ರ: ದಿನೇಶ್ ಮಾನೀರ್

## ಕಾಡು ಸೃಷ್ಟಿಸಿದ್ದೇ ನಾವು!




ಪಶ್ಚಿಮ ಘಟ್ಟದ ತಪ್ಪಲಿನಲ್ಲಿಯೇ ವಾಸಿಸುವ ನಾವು ಈ ಘಟ್ಟವನ್ನು ಸಂರಕ್ಷಿಸಬೇಕು ಎಂಬ ಮಾತಿಗೆ ಖಂಡಿತ ಸಹಮತ ವ್ಯಕ್ತಪಡಿಸುತ್ತೇವೆ. ಆದರೆ ಸಂರಕ್ಷಣಾ ಪ್ರದೇಶವನ್ನು ಗುರುತಿಸಲು ತೆಗೆದುಕೊಂಡ ಮಾನದಂಡಗಳು ಯಾವುದು ಎಂಬುದರ ಬಗ್ಗೆ ನಮ್ಮ ತಗಾದೆ ಇದೆ.

ನಾವು ದಶಕಗಳ ಹಿಂದೆ ಗೋಮಾಳ ಪ್ರದೇಶಗಳಲ್ಲಿ ಮರಗಳನ್ನು ನೆಟ್ಟು ಕಾಫಿ ಬೆಳೆಗೆ ಪೂರಕವಾದ ವಾತಾವರಣ ರೂಪಿಸಿಕೊಂಡಿದ್ದೇವೆ. ಬಯಲಿನಂತಿದ್ದ ಗೋಮಾಳ ಪ್ರದೇಶಗಳು ಈಗ ದಟ್ಟ ಹಸಿರುಕಾನನದಂತಾಗಿದೆ. ಇದೆಲ್ಲವನ್ನೂ ಕಾಡೆಂದು ತ್ಯಜಿಸಬೇಕು ಎಂದರೆ ಹೇಗೆ? ಹೀಗೊಂದು ತ್ಯಾಗ ಮಾಡಬೇಕು ಎಂಬುದು ಅನಿವಾರ್ಯವಾಯಿತೆಂದೇ ಒಪ್ಪಿಕೊಳ್ಳೋಣ. ನನ್ನದೊಂದು ಪ್ರಶ್ನೆಯಿದೆ. ಮಂಗಳೂರಿನ ಎಂಆರ್‌ಪಿಎಲ್ ಕಂಪನಿ ಸ್ಥಾಪನೆಗೆ ಮುನ್ನ ಮಂಗಳೂರಿನಲ್ಲಿ ನಡೆದ ಸಭೆಯೊಂದರಲ್ಲಿ ಪರಿಸರ ತಜ್ಞರೊಬ್ಬರು, 'ನಂದಿಕೂರು ಉಷ್ಣವಿದ್ಯುತ್ ಸ್ಥಾವರ, ಕನ್ಯಾಕುಮಾರಿಯ ಕೂಡಂಕುಳಂ ಅಣುವಿದ್ಯುತ್ ಸ್ಥಾವರಗಳು ಕಾರ್ಯಾರಂಭ ಮಾಡಿದ ಕೆಲವೇ ದಶಕಗಳಲ್ಲಿ ಪಶ್ಚಿಮ ಘಟ್ಟವು ನಾಶವಾಗುತ್ತದೆ' ಎಂದು ಭವಿಷ್ಯ ನುಡಿದಿದ್ದರು. ಇತ್ತೀಚೆಗಿನ ವರ್ಷಗಳಲ್ಲಿ ಪಶ್ಚಿಮ ಘಟ್ಟದಲ್ಲಿ ನಡೆಯುತ್ತಿರುವ ಹವಾಮಾನ ವೈಪರೀತ್ಯಗಳನ್ನು ಗಮನಿಸಿದರೆ ಅವರ ಮಾತು ನಿಜವೆನಿಸತೊಡಗಿದೆ. ಪ್ರಸ್ತುತ ನಮ್ಮ ಹಳ್ಳಿಗಳಲ್ಲಿ ಸುಮಾರು 16 ಜಾತಿಯ ಗಿಡಗಳು ಹಣ್ಣುಗಳನ್ನು ಬಿಡುತ್ತಿಲ್ಲ. ಕೆಲವೊಂದು ಗಿಡಗಳು ಸೊಗಸಾಗಿ ಚಿಗುರೊಡೆದು, ಹೂಬಿಟ್ಟಿರುತ್ತವೆ, ಆದರೆ ಮರುದಿನವೇ ಸುಟ್ಟಂತೆ ಒಣಗಿಕೊಂಡಿರುತ್ತವೆ. ಯಾಕೆ ಹೀಗಾಗುತ್ತಿದೆ? ಅಂದರೆ ನಗರ ಪ್ರದೇಶಗಳಲ್ಲಿ ವಾಸಿಸುವವರಿಗೆ ಬೇಕು ಬೇಕಾದ ಸೌಕರ್ಯಗಳನ್ನು ಮಾಡಿಕೊಳ್ಳಲು ಯಾವುದೇ ಅಡೆತಡೆಗಳಿರುವುದಿಲ್ಲ. ಪಶ್ಚಿಮ ಘಟ್ಟದ ಬಳಿಯ ಹಳ್ಳಿಗಳಲ್ಲಿ ವಾಸಿಸವವರಿಗೆ ಮಾತ್ರ ಎಲ್ಲ ನಿರ್ಬಂಧನೆಗಳನ್ನು ಯಾಕೆ ಹೇರುತ್ತಾರೆ? ತ್ಯಾಗವನ್ನು ಮಾಡಲು ಎಲ್ಲರೂ ಸಿದ್ಧರಿರಬೇಕಲ್ಲವೇ?

**-ಕೀರೇಹಳ್ಳಿ ಕೃಷ್ಣಪ್ಪ**
ಬೆಳೆಗಾರರ ಸಂಘದ ಮಾಜಿ ಅಧ್ಯಕ್ಷರು

ಗಾಳಿ ವಿದ್ಯುತ್ ಉತ್ಪಾದನೆ, ನದಿ ತಿರುವು ಯೋಜನೆಗಳಿಗೆ ಕಸ್ತೂರಿ ರಂಗನ್ ವರದಿ ಅನುಮತಿ ನೀಡುತ್ತದೆ. ಹಾಗಾದರೆ, ಪಶ್ಚಿಮ ಘಟ್ಟ ಸಂರಕ್ಷಣೆಯ ಮಾತೆಲ್ಲಿಂದ ಬಂತು? ಈ ಯೋಜನೆಗಳ ಮೂಲಕವೇ ಭಾರೀ ಪರಿಸರ ನಾಶವಾಗುತ್ತಿರುವುದನ್ನು ನಾವು ಈಗಾಗಲೇ ನೋಡುತ್ತಿದ್ದೇವೆ' ಎನ್ನುವುದು ಕಿಶೋರ್ ಅವರ ಆತಂಕ.

ಎರಡು ವರದಿಗಳ ಜೊತೆಗೆ ಎರಡು ಬಣಗಳೂ ಪರೋಕ್ಷವಾಗಿ ರೂಪುಗೊಂಡವು. ಗಾಡ್ಗೀಳ್ ವರದಿಯ ಪರವಾಗಿ ಕೆಲವರು, ಕಸ್ತೂರಿ ರಂಗನ್ ವರದಿಯ ಪರವಾಗಿ ಇನ್ನು ಕೆಲವರು. ಎರಡೂ ವರದಿಗಳನ್ನು ವಿರೋಧಿಸುವ ಮೂರನೆಯ ಬಣವೂ ಇದೆ. 'ಅಡ್ಡಗೋಡೆ ಮೇಲೆ ದೀಪವಿಟ್ಟಂತಹ ಶಿಫಾರಸುಗಳನ್ನು ಒಳಗೊಂಡ ಕಸ್ತೂರಿ ರಂಗನ್ ವರದಿಯು ಆಡಳಿತಕ್ಕೆ ಪರವಾಗಿ ರೂಪುಗೊಂಡಿದೆ' ಎಂಬ ಆರೋಪವನ್ನೂ ಹೊತ್ತುಕೊಂಡಿದೆ. ಕಸ್ತೂರಿ ರಂಗನ್ ಸಮಿತಿಯ ಸದಸ್ಯರು ಯಾರೂ ಪಶ್ಚಿಮ ಘಟ್ಟದ ಹಳ್ಳಿಗಳಿಗೆ, ಕಾಡಿನೊಳಗ ಭೇಟಿಯೇ ನೀಡಿಲ್ಲ. ಉಪಗ್ರಹ ಆಧಾರಿತ ಸಮೀಕ್ಷೆಯನ್ನು ಮಾಡಿ ಸಂರಕ್ಷಿಸಬೇಕಾದ ಪ್ರದೇಶಗಳನ್ನು ಗುರುತಿಸಿದ್ದಾರೆ. ಹಾಗಾಗಿ ಹಸಿರಾಗಿ ಕಾಣುವ ಕಾಫಿ ತೋಟ, ಕಂಗಿನ ತೋಟಗಳು, ರೈತರ ಬೆಳೆಗಳಿರುವ ಪ್ರದೇಶಗಳನ್ನೆಲ್ಲ ಕಾಡು ಎಂದು ಗುರುತು ಹಾಕಿದ್ದರಿಂದ ಜನರು ರೊಚ್ಚಿಗೇಳುವಂತಾಗಿದೆ' ಎಂಬುದು ಅನೇಕ ಗ್ರಾಮಸ್ಥರ ಅಳಲು.



ಪಶ್ಚಿಮ ಘಟ್ಟದ ಕಾಡುಗಳಲ್ಲಿನ ಅತಿ ವಿಶಿಷ್ಟ ಜೀವಿಗಳ ಜಾತಿಗೆ ಸೇರಿರುವ ಹಾಗೂ ಅಳಿವಿನಂಚಿನಲ್ಲಿರುವ ನೇರಳೆ ಕಪ್ಪೆ (ಪರ್ಪಲ್ ಫ್ರಾಗ್)